ಎಂದು ಯೋಚಿಸುತ್ತಾ ದೇಶಾವರಿ ನಗೆ ಬೀರುತ್ತಾ ಹಾಲ್‌ಗೆ ಬಂದರು. 'ವೆಲ್‌ಕಂ ಸಾರ್ ಬನ್ನಿ, ನಿಮಗೆ ಬೇಕಾದ ಫೋಟೋಗಳು ಒಳಗಿದೆ' ಎಂದ. ಆಂಜನೇಯರನ್ನು ತನ್ನ ಛೇಂಬರಿಗೆ ಕರೆದ. ಮೌನವಾಗಿ ಅವನ ಹಿಂದೆ ನಡೆದರು ಆಂಜನೇಯ.

ರಾಮಕೃಷ್ಣ ಕೊಟ್ಟ ಆಲ್ಬಂನ್ನು ಗಬ ಗಬಾ ತಿರುವಿ ಹಾಕಿದರು. ಫೋಟೋಗಳ ಪಕ್ಕದಲ್ಲಿ ಅವರ ವಿವರಗಳು ಇದ್ದವು. ಅದರಲ್ಲಿ ಮದುವೆಯಾಗದ ವೃದ್ಧ ಕನ್ಯಾಮಣಿಗಳು, ಮದುವೆಯಾಗುತ್ತಲೇ ಗಂಡ ಸತ್ತವರು ಅವರು ಅಷ್ಟಿಷ್ಟು ವರದಕ್ಷಿಣೆ ನೀಡಬಲ್ಲವರಾಗಿದ್ದರು. ಕೆಲ ಸಮಯ ಆ ವಿವರಗಳನ್ನು ನೋಡಿ ಅದನ್ನು ಮುಚ್ಚಿ ರಾಮಕೃಷ್ಣ ನೀಡಿದರು.

'ಯಜಮಾನರ ಮನಸ್ಥಿತಿ ರಾಮಕೃಷ್ಣರಿಗೆ ಅರ್ಥವಾಗಲೇ ಇಲ್ಲ', 'ನನಗೆ ಇವರಾರೂ ಇಷ್ಟವಾಗಲಿಲ್ಲ ನನಗೆ ಹುಡುಗಿ ಬೇಕಾಗಿಲ್ಲ. ತಾಯಿ ಬೇಕು. ಹೆಂಡತಿಯಾಗಿ ಅಲ್ಲ... ಅಮ್ಮನಾಗಿ ಬರಬೇಕು' ಎಂದು ದೀರ್ಘವಾಗಿ ಆಲೋಚಿಸುತ್ತಾ ನುಡಿದರು ಆಂಜನೇಯ.

ರಾಮಕೃಷ್ಣಗೆ ಪಿತ್ತ ನೆತ್ತಿಗೇರಿತು. 'ಸಮಾಜದ ಗೌರವಾನ್ವಿತ ವ್ಯಕ್ತಿ ಅರವತ್ತಾರು ವರುಷ ವಯಸ್ಸಿನಲ್ಲಿ ಮದುವೆಗಾಗಿ ತಳಮಳ ಪಡುತ್ತಿದ್ದಾನೆ. ಆದರೆ ಇವರ ಹುಚ್ಚು ಅರ್ಥವಾಗುತ್ತಿಲ್ಲ. ಏನು ಮಾಡಬೇಕೋ ತಿಳಿಯುತ್ತಿಲ್ಲ'.

'ಸಾರ್, ಈ ವಾರ ಪತ್ರಿಕಾ ಪ್ರಕಟಣೆ ಮಾಡ್ತೀನಿ ಅದರಲ್ಲಿ ನಿಮಗೆ ಸರಿ ಕಾಣುವವರು ಬರಬಹುದು. ಒಂದೆರಡು ದಿನ ಕಾಯಿರಿ, ಪ್ಲೀಜ್' ಎಂದು ರಾಮಕೃಷ್ಣ ಬೇಡಿಕೊಂಡ.

'ಆಗಲಿ, ಆದರೆ ತಡ ಮಾಡಬೇಡ' ಎಂದು ಹೊರಟರು.

ವಾರವಾಗುತ್ತಲೇ ಮತ್ತೆ ರಾಮಕೃಷ್ಣನ ಆಫೀಸಿನಲ್ಲಿ ಆಂಜನೇಯ ಪ್ರತ್ಯಕ್ಷವಾದರು.

'ಸಾರ್, ನಮ್ಮ ಪ್ರಕಟಣೆಗೆ ಒಳ್ಳೇ ರೆಸ್ಪಾನ್ಸ್ ಬಂದಿದೆ. ಇಗೋ ಇಲ್ಲಿ ನೋಡಿ' ಎಂದು ತನ್ನ ಡೆಸ್ಕ್‌ನಿಂದ ಫೈಲೊಂದನ್ನು ತೆಗೆದುಕೊಟ್ಟ. ಅದರಲ್ಲಿ ಸುಮಾರು ಐವತ್ತು ಬಯೋಡಾಟಾ ಮತ್ತು ಫೋಟೋ ಇದ್ದವು. ಆಂಜನೇಯ ಒಂದೊಂದನ್ನೇ ತೆಗೆದು ನೋಡಿ ಪಕ್ಕಕ್ಕೆ ಇಡುತ್ತಿದ್ದಾನೆ. ಆ ಐವತ್ತರಲ್ಲಿ ಒಂದಕ್ಕೆ ಮಾತ್ರ ಫೋಟೋ ಇರಲಿಲ್ಲ. ವಿವರಗಳೊಂದಿಗೆ ಆಕೆ ಬರೆದ ಬಿನ್ನಹವನ್ನು ಆಂಜನೇಯ ಓದಿದರು. ರಾಮಕೃಷ್ಣ ತನ್ನ ಕೆಲಸ ತಾನು ಮಾಡುತ್ತಾ ಒಂದು ಕಣ್ಣಿನಿಂದ ಆಂಜನೇಯನನ್ನು ಗಮನಿಸುತ್ತಿದ್ದಾನೆ. ಫೋಟೋಗಳನ್ನು ನೋಡಿ ನೋಡಿ ಕೆಳಗೆ ಹಾಕುತ್ತಿದ್ದ ಆಂಜನೇಯನನ್ನು ನೋಡಿ ಅವನ ತಲೆ ಸಿಡಿಯುತ್ತಿತ್ತು. 'ಇದನ್ನು ಕನ್ಫರ್ಮ್ ಮಾಡು' ಎಂದು ಒಂದು ಬಿನ್ನಹವನ್ನು ರಾಮಕೃಷ್ಣನಿಗೆ ನೀಡಿದರು.


ಈಶ್ವರ

'ಸಾರ್, ಇದರ ಜೊತೆಗೆ ಫೋಟೋ ಇಲ್ಲ. ಈ ಬಿನ್ನಹವನ್ನು ಓದಿದಿರಿ. ಮದುವೆ ಮಾಡಿಕೊಳ್ಳದಿದ್ದರೆ ಕನಿಷ್ಠ ಮನೆಕೆಲಸಕ್ಕಾದರೂ ಸಿದ್ಧಳೆಂದು ಆಕೆ ಬರೆದಿದ್ದಾಳೆ. ಆದರೂ ನಿಮ್ಮ ಅಂತಸ್ತಿಗೆ, ನಿಮ್ಮಂಥವರಿಗೆ, ತಕ್ಕ ಸಂಬಂಧವೆನಿಸುವುದಿಲ್ಲ. ಅದಲ್ಲದೇ ಇಬ್ಬರು ಮಕ್ಕಳ ತಾಯಿ' ಎಂದು ಈಗಾಗಲೇ ಅದನ್ನು ಓದಿದ್ದ ರಾಮಕೃಷ್ಣ ಆಕ್ಷೇಪಿಸಿದ.

'ಮನೆ ಕೆಲಸದವಳಾಗಿಯಾದರೂ ಬರಲು ಸಿದ್ಧ ಎಂದು ಬರೆದ ಆಕೆಯ ಅಗತ್ಯತೆ ಮತ್ತು ಔದಾರ್ಯ ನನಗೆ ಇಷ್ಟವಾದವು. ಇನ್ನು ಫೋಟೋ ಅವಶ್ಯಕತೆ ಇಲ್ಲ' ಎಂದು ಗಂಭೀರವಾಗಿ ನುಡಿದರು ಆಂಜನೇಯ.

'ಸಾರ್, ಎರಡು ಮಕ್ಕಳ ತಾಯಿ' ಎಂದೇನೋ ಹೇಳಲು ಹೋದ ರಾಮಕೃಷ್ಣ ನನಗೆ ಗೊತ್ತು ಇಬ್ಬರು ಹೆಣ್ಣು ಮಕ್ಕಳು ಕೂಲಿ ಮಾಡುತ್ತಾ ಅವರನ್ನು ಓದಿಸುತ್ತಿದ್ದಾಳೆ. ಪ್ರೀತಿಸಿ ಮದುವೆ ಮಾಡಿಕೊಂಡ ಮೂರ್ಖನು ಅಮಾಯಕರಾದ ಮಕ್ಕಳ ಸಲುವಾಗಿ ಆಕೆ ಬದುಕುತ್ತಿದ್ದಳೆ ಅಷ್ಟೇನಾ, ಇನ್ನೇನಾದರೂ ಬರೆದಿರುವರೇ?' ನೇರವಾಗಿ ರಾಮಕೃಷ್ಣನನ್ನು ದೃಷ್ಟಿಸುತ್ತಾ ಕೇಳಿದ.

'ಹಾಗೇ ಆಗಲಿ ಸಾರ್, ಅದರಲ್ಲಿರುವ ವಿಳಾಸಕ್ಕೆ ಪತ್ರ ಬರೆದು ಕೂಡಲೇ ಹೈದರಾಬಾದ್‌ಗೆ ಬರಲು ತಿಳಿಸುತ್ತೇನೆ. ನೀವು ಹೇಳಿದ ಹಾಗೆ ರಿಜಿಸ್ಟ್ರಾರ್ ಆಫೀಸಿಗೆ ಹೋಗೋಣ ಏನಾದರಾಗಲಿ, ಒಮ್ಮೆ ರಾಜಮಂಡ್ರಿಗೆ ಹೋಗಿ ವಿಚಾರಿಸಿದರೆ ಮೇಲಲ್ಲವೇ?' ಎಂದ ರಾಮಕೃಷ್ಣ.

'ಅವಶ್ಯಕತೆ ಇಲ್ಲ. ಈ ಬಿನ್ನಹವೇ ಆಕೆಯ ಸಂಸ್ಕಾರವನ್ನು ತಿಳಿಸುತ್ತದೆ. ಅನ್ನ ಬೆಂದಿದೆಯೋ ಇಲ್ವೋ ಅನ್ನೋದಕ್ಕೆ ಒಂದು ಅಗುಳು ನೋಡಿದರೆ ಸಾಕು ಅಲ್ವೇ?' ಎಂದು ತನ್ನ ಹುಡುಕಾಟ ಫಲಿಸಿದ್ದಕ್ಕೆ ಸಂತೋಷದಿಂದ ನುಡಿದ. 'ಹಾಗೇ ಆಗಲಿ ಸಾರ್ ಉಳಿದ ವಿಷಯಗಳನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ' ಎಂದ ರಾಮಕೃಷ್ಣ.

ಸ್ವಲ್ಪ ಹೊತ್ತಿನಲ್ಲೇ ಮನೆ ಸೇರಿದ ಆಂಜನೇಯ ತನ್ನ ಮದುವೆ ಪ್ರಯತ್ನಗಳನ್ನೆಲ್ಲಾ ತಾಯಿಗೆ ವಿವರಿಸಿ ತಿಳಿಸಿದ. ಅಂದು ರಾತ್ರಿ ಮಕ್ಕಳು ಮತ್ತು ಸೊಸೆಯಂದಿರ ಫೋನ್, ಭಾಷಾ ಸೀರಿಯಸ್ಸಾಗಿ ಇಬ್ಬರೂ ತಂದೆಗೆ ದುರ್ಭಾಷೆಯಲ್ಲಿ ಮಾತನಾಡಿದರು. ರಾಮಕೃಷ್ಣ ಅವರಿಗೆ ತಿಳಿಸಿ ಹೇಳಿದ್ದಾನೆ. ಆಂಜನೇಯ ಮಕ್ಕಳ ಮಾತು ಕೇಳಿ ಧೃತಿಗೆಡಲಿಲ್ಲ; ನಕ್ಕು ಸುಮ್ಮನಾದರು.

'ಚಿರಂಜೀವಿಗಳಿಗೆ, ಆಶೀರ್ವಾದಗಳು. ಈ ವಯಸ್ಸಿನಲ್ಲಿ ನಾನೇಕೆ ಮದುವೆಯಾದೆನೆಂದು ನಿಮಗೆ ತಿಳಿಯದಾ? ನನ್ನ ಅಮ್ಮನನ್ನು, ನನ್ನನ್ನು ಅನಾಥರನ್ನಾಗಿ ಮಾಡಿ ನಿಮ್ಮ ದಾರಿ ನೀವು ಹಿಡಿದಿರಿ. ಈ ಲೋಕದಲ್ಲಿ ಎಂಬತ್ತಾರರ ನಿಮ್ಮ ಅಜ್ಜಿ, ಅರವತ್ತಾರರ ನಿಮ್ಮ ಹೆತ್ತ ತಂದೆ, ಯಾವ ಆಧಾರವಿಲ್ಲದೇ ಹೇಗೆ ಬದುಕಬಲ್ಲರೆಂದು ಒಂದು ಕ್ಷಣವಾದರೂ ನೀವು ಯೋಚಿಸಿದಿರಾ? ನನ್ನ ಅಮ್ಮನಿಗೂ ನನಗೂ ಸಮಯಕ್ಕೆ ಸರಿಯಾಗಿ ತುತ್ತು ಅನ್ನವನ್ನು ನೀಡುವ ತಾಯಿಗಾಗಿ, ನಾವು ಅಕಸ್ಮಾತ್ ನೆಲ ಹಿಡಿದರೆ ತಾಯಿಯಂತೆ ಅಕ್ಕರೆಯಿಂದ ಸೇವೆ ಮಾಡಲು ಮಾನವತ್ವವುಳ್ಳ ಜೀವಕ್ಕಾಗಿ ನಾನು ಮದುವೆಯಾಗುತ್ತಿದ್ದೇನೆ'.

'ಮನೆಯಿದೆ, ಅವಶ್ಯವಿದ್ದಷ್ಟು ಹಣವಿದೆ. ಆದರೆ ನೀರಡಿಕೆ ಆದಾಗ ಗುಟುಕು ನೀರು ಗಂಟಲಿಗೆ ಹಾಕುವ ನನ್ನವರೇ ಇಲ್ಲವಾದರು. ಆದ್ದರಿಂದ ಇಬ್ಬರು ಹೆಣ್ಣುಮಕ್ಕಳ ತಾಯಿಯನ್ನೇ ಬಯಸಿ ಬಯಸಿ ಮದುವೆಯಾಗುತ್ತಿದ್ದೇನೆ. ತಂದೆಯಾಗಿ ಆ ಇಬ್ಬರು ಹುಡುಗಿಯರಿಗೆ ಸುಂದರ ಬದುಕನ್ನು ಕೊಡಲೆಂದೇ ಮದುವೆಯಾಗುತ್ತಿದ್ದೇನೆ. ನನ್ನಿಂದ ಅವರಿಗೆ ಒಳ್ಳೇದಾಗಬೇಕು. ನಾನು, ನನ್ನ ತಾಯಿ ಬದುಕಿರುವವರೆಗೆ ಅವರಿಗೆ ಯಾವ ತೊಂದರೆಯಾಗದಂತೆ ನೋಡಿಕೊಳ್ಳುತ್ತೇನೆ. ನಮ್ಮ ತದನಂತರ ನಾವು ಈಗಿರುವ ಮನೆಯನ್ನು, ಬ್ಯಾಂಕಿನಲ್ಲಿ ಖರ್ಚಾಗಿ ನಂತರ ಉಳಿದ ಮೊತ್ತವನ್ನು ಆಕೆಗೇ ಕೊಡುತ್ತೇನೆ. ತಪ್ಪು ಎನ್ನುವಿರಾ? ಇಷ್ಟು ವರ್ಷ ಪೋಷಿಸಿ ವಿದ್ಯಾಭ್ಯಾಸ ನೀಡಿ, ಮದುವೆ ಮಾಡಿ ಕಾಪಾಡಿದಂತಹ ಮಕ್ಕಳು ನಮ್ಮನ್ನು ಎಂಜಲೆಲೆಯಂತೆ ಬಿಸಾಡಿ ಹೋದ ಮೇಲೆ, ಆ ಎಂಜಲೆಲೆಗಳನ್ನು ನಂಬಿ ಬದುಕಲು ಬರುತ್ತಿರುವ ಆ ಮಹಾತಾಯಿಗೆ ಇದಕ್ಕಿಂತ ನಾವು ಹೆಚ್ಚು ಏನು ಮಾಡಬಲ್ಲೆವು? ನನ್ನ ಮರಣಾನಂತರ ಸರ್ಕಾರದಿಂದ ಬರುವ ಪೆನ್ಷನ್ ಆಕೆಗೆ ಬರುತ್ತದೆ. ಆಕೆ ಬದುಕಿರುವವರೆಗೆ ಇಬ್ಬರು ಕುಮಾರಿಯರನ್ನು ಓದಿಸುತ್ತಾ ಚೆನ್ನಾಗಿ ಬದುಕಬಹುದಲ್ಲವೇ?

'ಈಗ ಹೇಳಿ, ನಾನು ಮಾಡುತ್ತಿರುವುದು ತಪ್ಪೇ? ಒಂಬತ್ತು ತಿಂಗಳು ಹೊತ್ತು ಹೆತ್ತು ಕಾಪಾಡಿದ ನನ್ನಮ್ಮನನ್ನು ಕಾಪಾಡಲು ಒಬ್ಬ ತಾಯಿಯನ್ನು ಮನೆಗೆ ತರುವುದು ತಪ್ಪೇ? ಈವರೆಗೆ ನನ್ನದು, ನನ್ನವರು ಎಂಬ ಸ್ವಾರ್ಥದಿಂದ ನಿಮಗಾಗಿ ಮೂರನೇ ವ್ಯಕ್ತಿ ಬರದಂತೆ ಬದುಕಿದ್ದಕ್ಕೆ ದೊರಕಿದ್ದೇನು? ಮಸಣದ ಕಡೆಗೆ ಮುಖ ಮಾಡಿರುವ ಅಮ್ಮನಿಗೆ, ನಿಮ್ಮ ಶ್ರೇಯಸ್ಸಿಗಾಗಿ ಶ್ರಮಿಸಿದ ನನಗೆ ನೀವಿತ್ತ ಪಾರಿತೋಷಕವೆಂದರೆ 'ಒಂಟಿ ಬದುಕು' ಅಷ್ಟೇನಾ?

'ನಿಮ್ಮದಾರಿ ನಿಮಗೆ ನಮ್ಮ ದಾರಿ ನಮಗೆ, ನನ್ನಮ್ಮನಿಗೆ ಅಮ್ಮ ಬೇಕು, ನನಗೊಬ್ಬ ತಾಯಿ ಬೇಕು. ಆ ತಾಯಿಗೆ ಮಕ್ಕಳು ಬೇಕು. ಆ ಮಕ್ಕಳಿಗೆ ಭವಿಷ್ಯತ್ತು ಬೇಕು. ಅದಕ್ಕೆ ಮದುವೆ ಆಗುತ್ತಿದ್ದೇನೆ'.

ಇನ್ನೇನೂ ಬರೆಯಬೇಕೆನಿಸಲಿಲ್ಲ. ಮೇಲ್ ಮಾಡಿ ಮೌನವಾಗಿ ಕಣ್ಣು ಮುಚ್ಚಿಕೊಂಡು ಆಲೋಚನೆಯ ಕಡಲಿನಲ್ಲಿ ಮುಳುಗಿದ.